## ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಅತಿರಿಕ್ತೋಪವಾಸ ಚರ್ಚೆ — 2 | 2 |
| ಆರ್ಯತ್ವಸಂಪಾದನೆಗಾಗಿ ಲಿಪ್ತಿಗಳಲ್ಲ | 4 |
| ಲಿಪ್ತಿಗಳು ದಶಮಿಗೇ ಏಕೆ, ದ್ವಾದಶಿಗೆ ಏಕಲ್ಲ? | 6 |
| ಉಪೇಂದ್ರಭಟ್ಟರಲ್ಲ, ಉಪೇಂದ್ರಕೃಷ್ಣಭಟ್ಟರ ಪುತ್ರ | 8 |
| ಸಜ್ಜನರ ಜೊತೆಯಲ್ಲೊಂದು ಮಾತು | 13 |

## ಅತಿರಿಕ್ತೋಪವಾಸ ಚರ್ಚೆ — 2

ಅತಿರಿಕ್ತದ್ವಾದಶಿಯನ್ನು ನಿರ್ಣಯಿಸಬೇಕಾದರೆ ಲಿಪ್ತಿಗಳನ್ನು ಸೇರಿಸುವ ಆವಶ್ಯಕತೆಯಿಲ್ಲ ಎನ್ನುವದನ್ನು ಹಿಂದಿನ ಲೇಖನದಲ್ಲಿ ಕಂಡೆವು.

ಇದಕ್ಕೆ ಕೆಲವರು ಹೀಗೆ ಉತ್ತರವನ್ನು ನೀಡಿದ್ದಾರೆ[1] —

**ಸೂರ್ಯಸಿದ್ಧಾಂತದ ದಶಮಿಯನ್ನು ಆರ್ಯಮಾನವನ್ನಾಗಿ ಪರಿವರ್ತಿಸಿಕೊಳ್ಳಲು ಹೇಗೆ ಲಿಪ್ತಿಗಳನ್ನು ಸೇರಿಸುತ್ತೇವೆಯೋ ಹಾಗೆಯೇ ಸೂರ್ಯಸಿದ್ಧಾಂತದ ದ್ವಾದಶಿಯನ್ನೂ**

[1] ಅತಿರಿಕ್ತ ಏಕಾದಶಿಯ ಕುರಿತು ನಾನು ಮಾರ್ಗಶೀರ್ಷ ಶುಕ್ಲ ದ್ವಾದಶಿಯಂದು [11-12-2016] ಲೇಖನವನ್ನು (VNA215) ಪ್ರಕಟಿಸಿದ್ದೆ. ಅದಕ್ಕೆ ಇಂದು [27-12-2016] ಒಂದು ಉತ್ತರ (ಲೇಖಕರ ಹೆಸರಿಲ್ಲ) ಪ್ರಕಟವಾಗಿದೆ. ಅಲ್ಲಿನ ವಿಷಯದ ವಿಮರ್ಶೆ ಈ ಲೇಖನದಲ್ಲಿದೆ.

**ಆರ್ಯಮಾನವನ್ನಾಗಿ ಪರಿವರ್ತಿಸಿಕೊಳ್ಳಲು ಲಿಪ್ತಿಗಳನ್ನು ಸೇರಿಸಲೇ ಬೇಕು** ಎಂದು.

ಆ ಲೇಖನದಲ್ಲಿರುವ ವಾಕ್ಯಗಳನ್ನು ನೋಡಿ —

ಈ ಹಿಂದೆ ತಿಳಿದಂತೆ ಆರ್ಯತ್ವಸಂಪಾದನೆ ಹಾಗೂ ಲಿಪ್ತಿ ಇವೆರಡಕ್ಕೂ ಸಂಬಂಧವಿದೆ. ದಶಮಿಗೆ ಆರ್ಯತ್ವಸಂಪಾದನೆಯನ್ನು ಮಾಡಲು ಎಲ್ಲರೂ ಲಿಪ್ತಿಯನ್ನು ಸೇರಿಸಿದ್ದಾರೆ. ಹಾಗಿದ್ದಾಗ ದ್ವಾದಶಿಗೆ ಆರ್ಯತ್ವವನ್ನು ಸಂಪಾದನೆ ಮಾಡಲು ಲಿಪ್ತಿಗಳನ್ನು ಸೇರಿಸಲೇ ಬೇಕಲ್ಲವೇ? ಲಿಪ್ತಿಗಳನ್ನು ಸೇರಿಸಿಯೇ ಅತಿರಿಕ್ತದ್ವಾದಶಿಯ ವಿಚಾರವನ್ನು ಮಾಡಬೇಕು ಎಂದು ಸಿದ್ಧವಾಗುತ್ತದೆ ಅಲ್ಲವೇ?

ದಶಮಿಗೆ ಆರ್ಯಸಂಪಾದನೆಯಾಗುವುದಕ್ಕಾಗಿ ಲಿಪ್ತಿಗಳನ್ನು ಸೇರಿಸಿ ದ್ವಾದಶಿಗೆ ಬಿಟ್ಟರೆ ಅರ್ಧಜರತೀಯವಾಗುವುದಿಲ್ಲವೇ?

1. ದ್ವಾದಶೀ ತಿಥಿಗೆ ಲಿಪ್ತಿಗಳನ್ನು ಸೇರಿಸಬೇಕು ಎಂದು ತಮ್ಮ ದಿನತ್ರಯ ನಿರ್ಣಯ ಎಂಬ ಕೃತಿಯಲ್ಲಿ ಶ್ರೀವಿದ್ಯಾಧೀಶತೀರ್ಥರು ಸ್ಪಷ್ಟ ನಿರ್ಣಯಿಸಿದ್ದಾರೆ. 2. ಆ ಗ್ರಂಥ ಉಪಲಬ್ಧವಾಗಿದೆ. ಪ್ರಕಟವಾಗಿದೆ. 3. ಶ್ರೀಪಂಡಿತಾಚಾರ್ಯರು, ಶ್ರೀವಾದಿರಾಜರು ದ್ವಾದಶಿಗೆ ಲಿಪ್ತಿಯನ್ನು ಸೇರಿಸಬಾರದು ಎಂಬ ನಿಷೇಧವನ್ನು ಸರ್ವಥಾ ಮಾಡಿಲ್ಲ. 4. ದಶಮಿಯ ಆರ್ಯತ್ವಸಂಪಾದನೆಗೆ ಲಿಪ್ತಿಗಳನ್ನು ಸೇರಿಸದಮೇಲೆ ದ್ವಾದಶಿಗೆ ಆರ್ಯತ್ವಸಂಪಾದನೆಯನ್ನು ಮಾಡಲು ಲಿಪ್ತಿಗಳನ್ನು ಸೇರಿಸಲೇ ಬೇಕು.

## ಆರ್ಯತ್ವಸಂಪಾದನೆಗಾಗಿ ಲಿಪ್ತಿಗಳಲ್ಲ

ಇದಕ್ಕೆ ಮೊದಲ ಉತ್ತರ — ಲಿಪ್ತಿಗಳನ್ನು ಬಳಸುವದು ಆರ್ಯಮಾನವನ್ನಾಗಿ ಪರಿವರ್ತಿಸಲು ಸರ್ವಥಾ ಅಲ್ಲ.

ಅವರ ಕೋಷ್ಟಕದಲ್ಲಿಯೇ ದಶಮೀ, ಆರ್ಯ, ಲಿಪ್ತಿ, ದ್ವಾದಶೀ, ಆರ್ಯ, ಲಿಪ್ತಿ ಎಂದು ಎಂದು ಮುದ್ರಣ ಮಾಡುತ್ತಾರೆ.

ದಶಮೀ, ದ್ವಾದಶಿಗಳು ಎಂದರೆ ಸೂರ್ಯಸಿದ್ಧಾಂತದ ದಶಮೀದ್ವಾದಶಿಗಳು. ಆರ್ಯ ಎಂದರೆ ಆ ಸೂರ್ಯಸಿದ್ಧಾಂತದ ದಶಮೀ ದ್ವಾದಶಿಗಳನ್ನು ಆರ್ಯಮಾನಕ್ಕಾಗಿ ಪರಿವರ್ತನೆ ಮಾಡಿಕೊಳ್ಳಬೇಕಾದರೆ ಸೇರಿಸಬೇಕಾದ ಗಳಿಗೆ ಪಳಗಳು.

ಲಿಪ್ತಿ ಎಂದರೆ ಶ್ರೀ ಪಂಡಿತಾಚಾರ್ಯರು ಹೇಳಿದ ಲಿಪ್ತಿಗಳು[2].

---

[2] ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಕೇವಲ ದಶಮೀವೇಧಕ್ಕೆ ಲಿಪ್ತಿಗಳನ್ನು ಹೇಳಿದ್ದಾರೆ, ದ್ವಾದಶಿಗಲ್ಲ ಎನ್ನುವದು ನನ್ನ ಪ್ರತಿಪಾದನೆ. ಎರಡಕ್ಕೂ ಲಿಪ್ತಿಗಳನ್ನು ಸೇರಿಸಬೇಕು ಎನ್ನುವದು ಅವರ ಪ್ರತಿಪಾದನೆ.

ಇಲ್ಲಿ ಆರ್ಯ ಎಂದು ಆರ್ಯಮಾನಕ್ಕೆ ಪರಿವರ್ತನೆ ಮಾಡಿಯಾಗಿದೆ. ಅದಾದ ನಂತರ ಲಿಪ್ತಿಯನ್ನು ಹೇಳುತ್ತಿದ್ದಾರೆ. ಅಂದ ಮೇಲೆ ಆರ್ಯಮಾನಕ್ಕೆ ಲಿಪ್ತಿಯನ್ನು ಸೇರಿಸಬೇಕು ಎನ್ನುವದು ಅವರೇ ಮುದ್ರಣ ಮಾಡಿರುವ ಕೋಷ್ಠಕದಿಂದ ತಿಳಿದು ಬರುವ ವಿಷಯ.

ಅಂದ ಬಳಿಕ ಆರ್ಯತ್ವಸಂಪಾದನೆಗಾಗಿ ಲಿಪ್ತಿಗಳು ಎಂದು ಹೇಗಾಗಲು ಸಾಧ್ಯ?

ಆರ್ಯತ್ವಸಂಪಾದನೆಗಾಗಿ ಲಿಪ್ತಿ ಎಂಬ ಅವರ ವಾದಕ್ಕೆ ಅವರ ಕೋಷ್ಠಕದಿಂದಲೇ ವಿರೋಧ ಉಂಟಾಗಿದೆ.

## ಲಿಪ್ತಿಗಳು ದಶಮಿಗೇ ಏಕೆ, ದ್ವಾದಶಿಗೆ ಏಕಲ್ಲ?

ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಲಿಪ್ತಿಗಳನ್ನು ಸೇರಿಸಲು ಹೇಳಿರುವದು ದಶಮೀವೇಧಕ್ಕೇ ಹೊರತು, ದ್ವಾದಶಿಗಲ್ಲ. ಶ್ರೀ ವಾದಿರಾಜಗುರುಸಾರ್ವಭೌಮರು ಇದಕ್ಕೆ ವ್ಯಾಖ್ಯಾನವನ್ನು ಮಾಡುತ್ತ " ಉತ್ತರಂ ಪೂರ್ವಕಾಲೇ ತು ಜ್ಞೇಯೇತ್ಥಂ ದಶಮೀ ತಿಥಿಃ" ಎಂದೇ ಹೇಳುತ್ತಾರೆ. ದ್ವಾದಶಿಗೆ ಎಂದು ಹೇಳಿಯೇ ಇಲ್ಲ.

ಮತ್ತು, ಇದು ದ್ವಾದಶಿಗೆ ಆಗಲು ಸಾಧ್ಯವೂ ಇಲ್ಲ ಎನ್ನುವದನ್ನು ಹಿಂದಿನ ಲೇಖನ, ಉಪನ್ಯಾಸಗಳಲ್ಲಿಯೇ ಸ್ಪಷ್ಟಪಡಿಸಿದ್ದೇನೆ.

ಕಾರಣ, ಪಂಡಿತಾಚಾರ್ಯರ ವಚನದಲ್ಲಿ ಚತುಷ್ಕಾದುತ್ತರಂ ಎಂದು ಅತ್ಯಂತಸ್ಪಷ್ಟವಾದ ಗಮಕವಿದೆ. ಅರುಣೋದಯದ ಆಚೆಯಲ್ಲಿ (ಅಂದರೆ ಅರುಣೋದಯ ಆರಂಭವಾಗುವದಕ್ಕಿಂತ ಮುಂಚೆ) ಇಷ್ಟು ಲಿಪ್ತಿಗಳಲ್ಲಿ ದಶಮೀ ಇರಬಾರದು ಎಂದು ಹೇಳುತ್ತಿದ್ದಾರೆ.

ದ್ವಾದಶಿಯಲ್ಲಿ ಅರುಣೋದಯದ ಪ್ರಸಕ್ತಿಯೇ ಇಲ್ಲ. ಸೂರ್ಯೋದಯದ ಪ್ರಸಕ್ತಿ ಇದೆ. ಆಗ ಚತುಷ್ಪಾದುತ್ತರಂ ಎನ್ನುವದನ್ನು ಹೇಗೆ ಕೂಡಿಸುತ್ತೀರಿ. (ಕೂಡಿಸಲು ಪ್ರಯತ್ನ ಪಟ್ಟಲ್ಲಿ, ವಿದ್ಯಾಧೀಶರ ವಚನ ಎಂದು ಅವರು ಉದಾಹರಿಸುತ್ತಿರುವ ವಾಕ್ಯದ ಸ್ಪಷ್ಟ ವಿರೋಧ ಬರುತ್ತದೆ. ಅವರು ಕೂಡಿಸಲು ಪ್ರಯತ್ನ ಪಡಲಿ, ಆ ನಂತರ ಅಪರಿಹಾರ್ಯವಾದ ವಿರೋಧವನ್ನು ತೋರಿಸಿಕೊಡುತ್ತೇನೆ.)

ಅರುಣೋದಯಕ್ಕಿಂತ ಮುಂಚೆ ಸೇರಿಸಬೇಕಾದ ಲಿಪ್ತಿಗಳನ್ನು, ಅರುಣೋದಯಕಾಲದ ಪ್ರಸಕ್ತಿಯೇ ಇಲ್ಲದ ದ್ವಾದಶಿಯಲ್ಲಿ ಹೇಗೆ ಕೂಡಿಸಲು ಸಾಧ್ಯ?

## ಉಪೇಂದ್ರಭಟ್ಟರಲ್ಲ, ಉಪೇಂದ್ರಕೃಷ್ಣಭಟ್ಟರ ಪುತ್ರ

ಇನ್ನು ಯಾವ ಶ್ರೀ ಉಪೇಂದ್ರಭಟ್ಟರು[3] ಶ್ರೀ ವಿದ್ಯಾಧೀಶಸ್ವಾಮಿಗಳ ನಿರ್ಣಯವನ್ನು ಉಲ್ಲೇಖಿಸಿದ್ದಾರೆ ಎಂದು ಇವರು ಹೇಳುತ್ತಾರೆಯೋ, ಅವರು ಈ ದ್ವಾದಶಿಯ ವಚನಗಳನ್ನು ಉಲ್ಲೇಖಿಸಿಲ್ಲ. ಹೊರತಾಗಿ, ದಶಮೀವೇಧದ ಕುರಿತಾಗಿ ಇರುವ ಶ್ರೀ ವಿದ್ಯಾಧೀಶರ ನಿರ್ಣಯವನ್ನು ಉಲ್ಲೇಖಿಸಿದ್ದಾರೆ. ಸುಂದರವಾಗಿ ವ್ಯಾಖ್ಯಾನಿಸಿದ್ದಾರೆ ಸಹಿತ. ದಶಮೀವೇಧದ ವಿಷಯದಲ್ಲಿ ಲಿಪ್ತಿಗಳನ್ನು

---

[3] ಆ ಲೇಖನದಲ್ಲಿ ಉಪೇಂದ್ರಭಟ್ಟರ ಮಾತು ಎಂದು ಕೆಲವನ್ನು ಉಲ್ಲೇಖಿಸಲಾಗಿದೆ. ಅದು ಶ್ರೀ ಉಪೇಂದ್ರಭಟ್ಟರ ವಚನಗಳಲ್ಲ. ಶ್ರೀ ಉಪೇಂದ್ರಕೃಷ್ಣಭಟ್ಟರ ಪುತ್ರರದು. ಆ ವ್ಯಾಖ್ಯಾನದ ಅಂತ್ಯದಲ್ಲಿ ಅತ್ಯಂತ ಸ್ಪಷ್ಟವಾಗಿ ಅವರು ತಿಳಿಸಿದ್ದಾರೆ —

**ಉಪೇಂದ್ರಕೃಷ್ಣಭಟ್ಟಾರ್ಯ**
**ಸೂನುನಾ ಶ್ರೀಶತುಷ್ಟಯೇ**
**ವಿವೃತೋಽಯಂ ಯಥಾಬೋಧೋ**
**ಕೃಷ್ಣಾಮೃತಮಹಾರ್ಣವಃ**

**ಇತಿ ಉಪೇಂದ್ರಕೃಷ್ಣಭಟ್ಟಾರ್ಯಸೂನುವಿರಚಿತಂ ಸಮಾಪ್ತಮ್**

ಸೇರಿಸಬೇಕು ಎನ್ನುವದರಲ್ಲಿ ನಮ್ಮ ವಿರೋಧವೇ ಇಲ್ಲ.

ಶ್ರೀ ವಿದ್ಯಾಧೀಶರ ನಿರ್ಣಯದ ಅನುಸಾರವಾಗಿ ದಶಮೀವೇಧದ ಲಿಪ್ತಿಗಳನ್ನು, ಆರ್ಯಮಾನದ ಘಟಿಕಾ ಪಳಗಳನ್ನು ಅತ್ಯಂತ ಸುಂದರವಾಗಿ ಮತ್ತು ವಿಸ್ತಾರವಾಗಿ ವ್ಯಾಖ್ಯಾನಿಸಿ ವಿಷಯವನ್ನು ಮಂಡಿಸಿರುವ ಶ್ರೀ ಉಪೇಂದ್ರಭಟ್ಟರ ಪುತ್ರರು ಯಾಕಾಗಿ ದ್ವಾದಶೀವಿಷಯದಲ್ಲಿ ಲಿಪ್ತಿಗಳನ್ನು ಸೇರಿಸಬೇಕು ಎನ್ನುವದನ್ನು ಪ್ರತಿಪಾದಿಸಿಲ್ಲ?

ದಶಮಿಯ ವಿಷಯದಲ್ಲಿ ಶ್ರೀ ವಿದ್ಯಾಧೀಶರ ನಾಮವನ್ನು ತುಂಬ ಗೌರವದಿಂದ ಉಲ್ಲೇಖಿಸಿ, ಅವರು ಹೇಳಿದ ನಿರ್ಣಯವನ್ನು ವಿಶದೀಕರಿಸಿ ಪ್ರತಿಷ್ಠಾಪಿಸುವ ಶ್ರೀ ಉಪೇಂದ್ರಭಟ್ಟರ ಪುತ್ರರು ದ್ವಾದಶಿಯ ವಿಷಯದಲ್ಲಿ ಮಾತ್ರ ಕೆಲವರು ಹೀಗೆ ಹೇಳುತ್ತಾರೆ ಎಂದು ಉಲ್ಲೇಖಿಸಿ ಬಿಟ್ಟು ಬಿಡುತ್ತಾರೆ.

ಇದರಿಂದಲೂ ತಿಳಿಯುವ ವಿಷಯವೇನು, ಶ್ರೀ ವಿದ್ಯಾಧೀಶರು ದ್ವಾದಶಿಯಲ್ಲಿ ಲಿಪ್ತಿಗಳನ್ನು ಸೇರಿಸಬೇಕು ಎಂದು ಹೇಳಿಲ್ಲ ಎನ್ನುವದು.

ಶ್ರೀ ಸ್ಮೃತಿಮುಕ್ತಾವಲಿ ಕೃಷ್ಣಾಚಾರ್ಯರೂ ಉಲ್ಲೇಖಿಸಿಲ್ಲ, ದಶಮೀವೇಧದ ವಿಷಯದಲ್ಲಿ ವಿದ್ಯಾಧೀಶರನ್ನು ಆದರದಿಂದ ಉಲ್ಲೇಖಿಸಿ ಅವರ ನಿರ್ಣಯವನ್ನು ಸಮರ್ಥಿಸುವ ಶ್ರೀ ಉಪೇಂದ್ರಭಟ್ಟರ ಪುತ್ರರೂ ದ್ವಾದಶಿಯ ವಿಷಯದಲ್ಲಿ ಇದು ವಿದ್ಯಾಧೀಶರ ನಿರ್ಣಯ ಎನ್ನದೇ ಕೆಲವರು ಹೀಗೆ ಹೇಳುತ್ತಾರೆ ಎನ್ನುತ್ತಾರೆ. ಅಂದ ಮೇಲೆ ದ್ವಾದಶಿಗೂ ಲಿಪ್ತಿಗಳನ್ನು ಸೇರಿಸುವದುವಿದ್ಯಾಧೀಶರ ಮೊದಲಿಗೆ ವಿದ್ಯಾಧೀಶರ ನಿರ್ಣಯದಲ್ಲಿರಲಿಲ್ಲ ಎನ್ನುವದು ಸ್ಪಷ್ಟವಾಗುತ್ತದೆ.

ಲಿಪ್ತಿಗಳನ್ನು ಸೇರಿಸುವದು ಆರ್ಯಮಾನಕ್ಕಾಗಿ ಎಂದೇನು ಇವರು ಹೇಳುತ್ತಿದ್ದಾರೆ ಅದಕ್ಕೆ ಉತ್ತರವೂ ಸಹ ಶ್ರೀ ಉಪೇಂದ್ರಕೃಷ್ಣಭಟ್ಟರ ಪುತ್ರರ ವ್ಯಾಖ್ಯಾನದಲ್ಲಿಯೇ ದೊರೆಯುತ್ತದೆ.

ಅವರು ಅತ್ಯಂತ ಸ್ಪಷ್ಟವಾಗಿ ಲಿಪ್ತಿಗಳನ್ನು ಸಂಸ್ಕಾರಲಿಪ್ತಿಗಳು ಎಂದು ಕರೆಯುತ್ತಾರೆ. ಮತ್ತು ವಿದ್ಯಾಧೀಶರ ಪ್ರಕಾರ ದಶಮೀವೇಧ ನಿರ್ಣಯ

ಮಾಡುವದನ್ನು ಅತ್ಯಂತ ಸುಲಲಿತವಾಗಿ ಬರೆಯುತ್ತಾರೆ —

**ಅತಿವೃದ್ಧೌ ವೇಧೋ ಯಥಾ — ಸಿದ್ಧಾಂತಾತ್ ಕರಣಪ್ರಕಾಶಕಘಟಿಕೇ ದ್ವೇ, ಏಕವಿಂಶದ್ವಿಘಟಿಕಾಃ। ಸಂಸ್ಕಾರಲಿಪ್ತಾಃ ಷೋಡಶ । ಸರ್ವಮೇಲನೇನ ಷಟ್ಪಂಚಾಶದ್ಘಟಿಕಯಾ ದಶಮ್ಯಾ ವಿದ್ಧಾ ಭವತಿ ।**

ಹೀಗೆ ಏಳೂ ರೀತಿಯ ವೇಧಗಳಲ್ಲಿ ಅವರು ವಿದ್ಯಾಧೀಶರ ನಿರ್ಣಯವನ್ನು ಸುಲಲಿತವಾಗಿ ಮಂಡಿಸುತ್ತಾರೆ.

ಅತಿವೃದ್ಧಿಯ ಪಕ್ಷದಲ್ಲಿ ಸೂರ್ಯಸಿದ್ಧಾಂತವನ್ನು ಆರ್ಯಮಾನಕ್ಕೆ ಪರಿವರ್ತಿಸಲು 2 ಗಳಿಗೆ 21 ವಿಘಳಿಗೆಗಳು. ಮತ್ತು ಸಂಸ್ಕಾರಲಿಪ್ತಿಗಳು ಹದಿನಾರು. ಅಂದರೆ 1 ಗಳಿಗೆ 20 ಪಳಗಳು ಎಂದು ತಿಳಿಸುತ್ತಾರೆ.

ಇಲ್ಲಿನ ಸಂಸ್ಕಾರಲಿಪ್ತಿ ಎಂಬ ಶಬ್ದ ಎಲ್ಲ ಸಮಸ್ಯೆಗೂ ಉತ್ತರವನ್ನು ನೀಡುತ್ತದೆ. ಲೇಖನವನ್ನು ಬರೆದಿರುವ ಬೇನಾಮಿ ಲೇಖಕರು ತಮಗೆ ಪಂಚಾಂಗಗಣಿತದ

ಜ್ಞಾನವಿಲ್ಲ ಎಂದು ಸ್ಪಷ್ಟವಾಗಿ ಬರೆದುಕೊಂಡಿದ್ದಾರೆ. ಹೀಗಾಗಿ ಈ ಸಂಸ್ಕಾರಲಿಪ್ತಿ ಎಂಬ ಶಬ್ದದ ಅರ್ಥವನ್ನು ಅವರು ಗುರುಗಳಿಂದ ತಿಳಿದುಕೊಳ್ಳಲಿ. ಆ ಸಂಸ್ಕಾರಲಿಪ್ತಿ ಎಂಬ ಶಬ್ದ ಅದು ದಶಮಿಗೇ ಹೊರತು ದ್ವಾದಶಿಗಲ್ಲ ಎಂದು ಸ್ಥಾಪಿಸುತ್ತದೆ. ಅದನ್ನು ಗುರುಗಳ ಬಳಿ ಅಧ್ಯಯನ ಮಾಡಿ ತಿಳಿದುಕೊಂಡು ಆ ನಂತರ ಚರ್ಚೆಗೆ ಬರಲಿ.

ದಶಮೀವೇಧದ ವಿಷಯದಲ್ಲಿ ವಿದ್ಯಾಧೀಶರ ನಿರ್ಣಯವನ್ನು ಸುಲಲಿತವಾದ ಶೈಲಿಯಲ್ಲಿ ಮಂಡಿಸುವ ಶ್ರೀ ಉಪೇಂದ್ರಭಟ್ಟರ ಪುತ್ರರು ದ್ವಾದಶಿಯ ಕುರಿತು ಯಾಕೆ ಪ್ರತಿಪಾದಿಸಿಲ್ಲ? ಯಾಕಾಗಿ ಕೆಲವರು ಎಂದು ಅದನ್ನು ಉಲ್ಲೇಖಿಸುತ್ತಾರೆ ಎನ್ನುವ ಪ್ರಶ್ನೆಯನ್ನು ಹಿಂದೆಯೇ ತಿಳಿಸಿದ್ದೇನೆ.

## ಸಜ್ಜನರ ಜೊತೆಯಲ್ಲೊಂದು ಮಾತು

ತಾವು ಬರೆಯುತ್ತಿರುವದು ಯುಕ್ತಿಬದ್ಧವಾಗಿದೆ, ಪ್ರಮಾಣಯುಕ್ತವಾಗಿದೆ, ಸರಿಯಾಗಿದೆ ಎಂದು ಯಾವ ಲೇಖಕನಿಗೆ ನಿರ್ಣಯವಿರುತ್ತದೆ ಅಂತಹವರು ಮಾತ್ರ ತಮ್ಮ ಹೆಸರುಗಳನ್ನು ಲೇಖನದೊಂದಿಗೆ ಪ್ರಕಟಿಸುತ್ತಾರೆ.

ತಾವು ಹೇಳಿದ್ದು ಸರಿ ಎಂದು ತಮಗೇ ಯಾವಾಗ ನಿಶ್ಚಯವಿರುವದಿಲ್ಲ ಆಗ ಮಾತ್ರ ಕೆಲವರು ಬೇನಾಮಿ ಲೇಖನಗಳನ್ನು ಪ್ರಕಟಿಸುತ್ತಾರೆ.

ಒಂದು ವಿಷಯದ ಕುರಿತು ಬರೆದಾಗ ಆ ವಿಷಯವನ್ನು ನಾನು ಹೇಳಿದ್ದೇನೆ ಎಂದು ಹೇಳುವ ಧೈರ್ಯವೂ ಇದನ್ನು ಬರೆದ ವ್ಯಕ್ತಿಗಿಲ್ಲ ಎಂದಾಗ ಆ ವಿಷಯ ಎಷ್ಟು ಬಡಕಲು ಎನ್ನುವದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗುತ್ತದೆಯಲ್ಲವೇ?

ಇನ್ನು ವಿಷಯ ಪ್ರಧಾನ, ಹೆಸರಿಂದೇನು ಎಂಬೆಲ್ಲ ಬಂಡತನದ ವಾದಗಳನ್ನು ಮುಂದಿಡುತ್ತಾರೆ. ಅವರಿಗೆ ಗೊತ್ತಿಲ್ಲ, ಶ್ರೀ ವಿದ್ಯಾಧೀಶಸ್ವಾಮಿಗಳು ತಾವು ಬರೆದ ಕೃತಿಯನ್ನು ತಮ್ಮದು ಎಂದು

ಹೇಳಿಕೊಂಡದ್ದಕ್ಕೆ ತಾನೇ ಆ ಕೃತಿಯ ಕುರಿತು ಆದರ ಹುಟ್ಟುವದು, ಮಹಾನುಭಾವರು ಹೇಳಿದ್ದಾರೆ ಎಂದು.

ಶ್ರೀಮದಾಚಾರ್ಯರು ಹೇಳುತ್ತಾರೆ — **ಮಧ್ವೋಯತ್ತು ತೃತೀಯಮೇತದಮುನಾ ಗ್ರಂಥಃ ಕೃತಃ ಕೇಶವೇ** ಎಂದು. ಶ್ರೀಮಧ್ವಾಚಾರ್ಯರೆಂಬ ನಾನು ಈ ಕೃತಿಯನ್ನು ರಚಿಸಿದ್ದೇನೆ ಎಂದು.

ಶ್ರೀಮಟ್ಟೀಕಾಕೃತ್ಪಾದರು ಹೇಳುತ್ತಾರೆ —

**ಅಕ್ಷೋಭ್ಯತೀರ್ಥಮುನಿನಾ**
**ಶುಕವತ್ ಶಿಕ್ಷಿತಸ್ಯ ಮೇ**
**ವಚೋಭಿರಮೃತಪ್ರಾಯೈಃ**
**ಪ್ರೀಯಂತಾಂ ಸತತಂ ಬುಧಾಃ**

**ಜಯತೀರ್ಥಾಖ್ಯಭಿಕ್ಷುಣಾ ರಚಿತಾ**

ಅಕ್ಷೋಭ್ಯತೀರ್ಥಶ್ರೀಪಾದರ ಕಾರುಣ್ಯದಿಂದ ವಿದ್ಯೆ ಪಡೆದ ಶ್ರೀ ಜಯತೀರ್ಥಭಿಕ್ಷು ಎಂಬ ನಾನು ಈ ಕೃತಿಯನ್ನು ರಚಿಸಿದ್ದೇನೆ ಎಂದು.

ಶ್ರೀಮಚ್ಚಂದ್ರಿಕಾಚಾರ್ಯರು, ಶ್ರೀ ವಾದಿರಾಜರು, ಶ್ರೀ ವಿಜಯೀಂದ್ರರು, ಶ್ರೀ ರಾಘವೇಂದ್ರಸ್ವಾಮಿಗಳು ಮುಂತಾದ ಎಲ್ಲ ಮಹನೀಯರು, ಗ್ರಂಥಕಾರರು, ಸಣ್ಣ ಸಣ್ಣ ಸ್ತೋತ್ರಗಳನ್ನು ಮಾಡಿದ ಸ್ತೋತ್ರಕಾರರು ಸಹಿತ ತಮ್ಮ ಹೆಸರನ್ನು ತಿಳಿಸುತ್ತಾರೆ. ಹೆಸರನ್ನು ಹೇಳುವದು ಸರ್ವಥಾ ಅಹಂಕಾರವಲ್ಲ. ಭಗವಂತನ ಮುಂದೆ ನಿವೇದನೆ. ಶ್ರೀಮದಾಚಾರ್ಯರಿಂದ ಆರಂಭಿಸಿದ ಎಲ್ಲ ಮಹನೀಯರು ಸಹ ಈ ಸತ್ಸಂಪ್ರದಾಯವನ್ನು ಆಚರಿಸಿ ತೋರಿಸಿದ್ದಾರೆ.

ಅದರಲ್ಲಿಯೂ ವಿವಾದದ ವಿಷಯಗಳ ಕುರಿತು ಬರೆದಾಗ ಹೆಸರನ್ನು ದಾಖಲಿಸುವದು ಅನಿವಾರ್ಯವಾಗುತ್ತದೆ. ಇಲ್ಲದಿದ್ದರೆ ಕತ್ತಲಲ್ಲಿ ಕಲ್ಲು ಹೊಡೆಯುವ ಕಳ್ಳಮಾರ್ಗವಾಗುತ್ತದೆ.

ಬೇನಾಮಿತನ ಲೇಖನದಲ್ಲಿ ಸತ್ವವಿಲ್ಲ ಎನ್ನುವದನ್ನು ಸೂರ್ಯಪ್ರಕಾಶದಷ್ಟು ಸ್ಪಷ್ಟಪಡಿಸುತ್ತದೆ. ತಾನು ಹೇಳುವ ವಿಷಯದಲ್ಲಿ ತನಗೆ ನಂಬಿಕೆ ಎಲ್ಲ ಎನ್ನುವದನ್ನು ಆ ಬೇನಾಮಿತನ ಸ್ಪಷ್ಟಪಡಿಸುತ್ತದೆ.

ಲಿಪ್ತಿಯನ್ನು ಸೇರಿಸುವದು ಆರ್ಯಮಾನಕ್ಕಾಗಿ ಪರಿವರ್ತಿಸಿಕೊಳ್ಳಲು ಅಲ್ಲ ಎನ್ನುವ ಸಾಮಾನ್ಯ ಆರಂಭಿಕ ವಿಷಯವೂ ತಿಳಿಯದ, ಗ್ರಂಥವನ್ನು ಬರೆದಿರುವದು ಉಪೇಂದ್ರಭಟ್ಟರೋ ಅವರ ಮಕ್ಕಳೋ ಎನ್ನುವದೂ ತಿಳಿಯದ ಆ ಬೇನಾಮಿ ವ್ಯಕ್ತಿ ಬರೆದ ಆ ಲೇಖನಕ್ಕೆ ಉತ್ತರದ ಅನಿವಾರ್ಯತೆ ಇಲ್ಲ.

ಆದರೂ ಜಿಜ್ಞಾಸುಗಳ ಸ್ಪಷ್ಟತೆಗಾಗಿ ಉತ್ತರ ನೀಡಿದ್ದೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ